**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ರವರ ನ್ಯಾಯಾಲಯ,</u>**
**<u>ನಂಜನಗೂಡು</u>**

**<u>ಸಿಸಿ ಸಂಖ್ಯೆ : 202/2020</u>**

ಫಿರ್ಯಾದುದಾರರು : ಗ್ರಾಮಾಂತರ ಪೊಲೀಸ್ ಠಾಣೆ, ನಂಜನಗೂಡು.

**ವಿರುದ್ಧ**

ಆರೋಪಿತರು : 1) ಮಲ್ಲಪ್ಪ ಬಿನ್ ಲೇಟ್ ಮಹಾದೇವಪ್ಪ,
ವಯಸ್ಸು ಸುಮಾರು 46 ವರ್ಷ,
ಕೆಎ-13 ಎ-3537 ರ ಲಾರಿ ಚಾಲಕ,
ವಾಸಃ ಹೊಸಪುರ ಗ್ರಾಮ,
ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ.

2) ಶಿವಣ್ಣ ಬಿನ್ ಲೇಟ್ ಗೂಳಿ ಬಸವಯ್ಯ
ಯಾನೆ ಗೂಳಿ ಮಾದಯ್ಯ,
**ಮರಣ ಹೊಂದಿರುತ್ತಾರೆ.**

:: **<u>ಆಪಾದನೆ</u>** ::

*ಶ್ರೀ ರಘುರಾಮ ಎನ್. ಎಸ್.,* ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಮೇಲ್ಕಂಡ ಆರೋಪಿಗಳಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಗಳನ್ನು ನಿರೂಪಿಸುತ್ತಿದ್ದೇನೆ.

ದಿನಾಂಕ 17.11.2019 ರಂದು ಮಧ್ಯಾಹ್ನ 1.30 ಗಂಟೆಯ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಗೊದ್ದನಪುರದಿಂದ ಮುಂದೆ ಮಂದಗೆರೆಯ ಕೆರೆ ಮತ್ತು ಕಾಳೇಗೌಡರವರ ಬಾಬ್ತು ಜಮೀನಿನ ಮಧ್ಯ ಹಾದು ಹೋಗಿರುವ ರಸ್ತೆಯಲ್ಲಿ 1ನೇ ಆರೋಪಿತರಾದ ತಾವು ತಮ್ಮ ಬಾಬ್ತು ಲಾರಿ

ಸಂಖ್ಯೆ.ಕೆಎ-13 ಎ-3537 ಅನ್ನು ಹಳ್ಳಿಕೆರೆ ಗ್ರಾಮದ ಕಡೆಯಿಂದ ಗೊದ್ದನಪುರ ಗ್ರಾಮದ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ 2 ನೇ ಆರೋಪಿಯ ಹೀರೋ ಹೊಂಡಾ ಸ್ಪೆಂಡ್ಲರ್ ಮೋಟಾರ್ ಸೈಕಲ್ ಗೆ ಡಿಕ್ಕಿ ಮಾಡಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಎರಡನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ 1 ನೇ ಆರೋಪಿತರಾದ ತಾವು ತಮ್ಮ ಬಾಬ್ತು ಲಾರಿ ಸಂಖ್ಯೆ.ಕೆಎ-13 ಎ-3537 ಅನ್ನು ಹಳ್ಳಿಕೆರೆ ಗ್ರಾಮದ ಕಡೆಯಿಂದ ಗೊದ್ದನಪುರ ಗ್ರಾಮದ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ 2 ನೇ ಆರೋಪಿಯ ಹೀರೋ ಹೊಂಡಾ ಸ್ಪೆಂಡ್ಲರ್ ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆಸಿ ಅಪಘಾತವುಂಟು ಮಾಡಿದ ಪರಿಣಾಮ, 2 ನೇ ಆರೋಪಿತರಿಗೆ ತೀವ್ರ ಸ್ವರೂಪದ ಗಾಯಗಳುಂಟಾಗಿ ಮೃತ ಪಟ್ಟಿರುತ್ತಾರೆ. ಆದುದರಿಂದ 1 ನೇ ಆರೋಪಿತರಾದ ತಮ್ಮ ನಿರ್ಲಕ್ಷತನದಿಂದ 2 ನೇ ಆರೋಪಿತರು ಮರಣ ಹೊಂದಿದ್ದರಿಂದ ತಾವು ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಕೊನೆಯದಾಗಿ, ಅದೇ ದಿನ, ವೇಳೆ ಹಾಗೂ ಅದೇ ಸ್ಥಳದಲ್ಲಿ ಆರೋಪಿತರಾದ ತಾವು ತಮ್ಮ ಬಾಬ್ತು ಲಾರಿ ಸಂಖ್ಯೆ.ಕೆಎ-13 ಎ-3537 ಅನ್ನು ಹಳ್ಳಿಕೆರೆ ಗ್ರಾಮದ ಕಡೆಯಿಂದ ಗೊದ್ದನಪುರ ಗ್ರಾಮದ ಕಡೆಗೆ ಅತಿ ವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ 2 ನೇ ಆರೋಪಿಯ ಹೀರೋ ಹೊಂಡಾ ಸ್ಪೆಂಡ್ಲರ್ ಮೋಟಾರ್ ಸೈಕಲ್ ಗೆ ಡಿಕ್ಕಿ ಹೊಡೆಸಿ ಅಪಘಾತವುಂಟು ಮಾಡಿದ ನಂತರ 2 ನೇ ಆರೋಪಿತರಿಗೆ ಸೂಕ್ತ ವೈದ್ಯಕೀಯ ಚಿಕಿತ್ಸೆ ಕೊಡಿಸದೆ ಹಾಗೂ ಸದರಿ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡದೆ ಹೋಗಿದ್ದರಿಂದ ತಾವು ಮೋಟಾರು ವಾಹನ ಅಧಿನಿಯಮ

ಕಲಂ 187 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾದ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

ಪ್ರಶ್ನೆಃ 1- ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೆ ?

1 ನೇ ಆರೋಪಿ ಉತ್ತರ :

ಪ್ರಶ್ನೆಃ 2 ಸದರಿ ಆಪಾದನೆಗಳನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕೋ ?

1 ನೇ ಆರೋಪಿ ಉತ್ತರ :

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆರೋಪಿತರ ಹೇಳಿಕೆಗಳನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಡಪಡಿಸಿರುತ್ತೇನೆ.

ದಿನಾಂಕಃ 13.09.2023

(ರಘುರಾಮ ಎನ್.ಎಸ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ನಂಜನಗೂಡು.